
ಕಥೆ



**ಮಂಜುಳಾ ಜಿ.ಎಚ್.**

ಕಲೆ: ಎಸ್.ವಿ. ಹೂಗಾರ್

# ಕೃಪಯಾ ಧ್ಯಾನ್ ದೀಜಿಯೇ..



ಎಲ್ಲವೂ ಪೂರ್ವ ನಿರ್ಧಾರಿತ ಮತ್ತು ಎಲ್ಲವೂ ಯಃಕಶ್ಚಿತ. ಅರಿಯದೇ ಹತ್ತಿಕೊಂಡ ಬೆಂಕಿ ಆರದೇ ಇತ್ತು. ಬೂದಿ ಕೊಡವಿ ಮತ್ತೆ ಮತ್ತೆ ಬೆಳಕಾಗಲು ಬೆಂಕಿಯೊಡನೆ ಸರಸವಾಡಲು ಸಾಥ್ ನೀಡುತ್ತಿತ್ತು. ಬೆಂಕಿಯದ್ದೋ-ಬೆಳಕಿನದ್ದೋ ಗೊತ್ತಿಲ್ಲದ ಸ್ಥಿತಿಯಲ್ಲೂ ವಾಸನೆ ಮೂಗಿಗೆ ಬಡಿಯುತ್ತಲೇ ಇತ್ತು. ಸಮಯ ನೋಡದೇ ಹೊರಟವಳಿಗೆ 'ಕೃಪಯಾ ಧ್ಯಾನ್ ದೀಜಿಯೇ ಗಾಡಿ ಸಂಖ್ಯಾ 163428....' ಎಂದು ಹೇಳುವಾಗ ಜೀವಂತಿಕೆಯ ಪ್ರಜ್ಞೆ ಎಚ್ಚರಿಸುತ್ತಿತ್ತು. ಅವಳದ್ದು ಮಲಪ್ರಭೆಯ ದಂಡೆಯ ಮೇಲಿನ ಊರು. ಗತಕಾಲದ ವಾಸನೆ ಮೂಗಿಗೆ ಬಡಿದಂತಾಗಿ ಒಂದು ಕ್ಷಣ ಕಣ್ಣರಳಿಸಿ ನಿಂತಳು. ವಾಸನೆಗಳು ಹಾಗೇ ಅಲ್ಲವೇ? ಆಗಾಗ ಸಮೀಪ ಬಂದು ಹೋದಂತೆ ಮಾಡುತ್ತಿರುತ್ತವೆ. ನಿಧಾನವಾಗಿ ವಾಸನೆಯನ್ನು ಎಳೆದುಕೊಂಡು ತನ್ನೊಳಗೆ ಆ ಘಳಿಗೆಯನ್ನು ಹೀರಿಕೊಂಡಳು. ಟ್ರೈನ್ ಬಂದೇ ಬಿಟ್ಟಿತು. ಬಿಎಲ್4 ಸೀಟ್ ನಂಬರ್ ಕನ್ಫರ್ಮ್ ಮಾಡಿಕೊಂಡಿದ್ದಳು. ಹಾಗಾಗಿ ಹೋಗಿ ಕುಳಿತುಕೊಳ್ಳುವುದು ತಡವಾಗಲಿಲ್ಲ. ಅವಳಿಗೆ ಈ ಪ್ರಯಾಣ ಮೊದಲು ಅಲ್ಲ, ಕೊನೆಯೂ ಅಲ್ಲ. ಸದ್ಯ ಯಾರಿಗೂ ಕಾಯುವ, ಎದುರು ನೋಡುವ ಪ್ರಮೇಯ ಇರಲಿಲ್ಲ. ಆದರೂ ರೈಲ್ವೆ ಸ್ಟೇಷನ್ನಿನಲ್ಲಿ ಬಡಿದ ವಾಸನೆ ಅವಳನ್ನು ಕಾಡುತ್ತಲೇ ಇತ್ತು. ಕಣ್ಣು ತಡಕಾಡುತ್ತಲೇ ಇತ್ತು.

ಇಲ್ಲದವರಿಂದಲೇ ಪಡೆದು ತಿನ್ನುವ, ಒಮ್ಮೊಮ್ಮೆ ಕಿತ್ತು ತಿನ್ನುವ ಈ ಜಗದೊಳಗೆ ಕಮ್ಯೂನಿಸಂನ ಗಾಳಿ ಒಮ್ಮೆ ಯಾದರೂ ಬೀಸಲಿ, ತನ್ನ ಮಣ್ಣಿಗೆ, ಅಲ್ಲಿ ಬೆಳೆದ ಬೆಳೆಗೆ ನೆರೂಡ ಕಾವ್ಯ ಬರೆದಂತೆ ಅವನ ಕಾವ್ಯದ ಕ್ರಾಂತಿಯ ಕಿಡಿ ಇಲ್ಲಿ ಹೊತ್ತಲಿ. ನಮ್ಮವರ ಮಾತು ನಮ್ಮವರಿಗೆ ಅರ್ಥವಾಗದ ಈ

